# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

**ದಿನಾಂಕಃ- 20.08.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಸುಧಾಮಣಿ ಎಸ್ ಎಸ್ ಬಿನ್ ಲೇಟ್ ನಾಗರಾಜು<br>40 ವರ್ಷ<br>ಶಿಕ್ಷಕ<br>ಮಾರಶೆಟ್ಟಿಹಳ್ಳಿ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

**ಪಾಟೀ ಸವಾಲುಃ-ಪ್ರತಿ ವಾದಿಗಳ ಪರ ವಕೀಲರಾದ ಶ್ರೀ.ಎಂ. ಜಿ. ಆರ್. ರವರಿಂದ**

1. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿನ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ವಾರಸುದಾರರ ಅರ್ಜಿಗೂ ಕೂಡ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಮದುವೆಯಲ್ಲಿ ಸುಮಾರು 10 ಜನ ಸೇರಿದ್ದರು. ನಿಮ್ಮ ಮದುವೆಗೆ ಹಾಜರಾಗಿದ್ದವರನ್ನು ಯಾರನ್ನಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ಎಂದರೆ ಸಾಕ್ಷಿ ನೋಡಬೇಕು ಎನ್ನುತ್ತಾರೆ. ನಿಮ್ಮ ವಿವಾಹವು ಸಿದ್ದರ ಬೆಟ್ಟ ದೇವಸ್ಥಾನದಲ್ಲಿ ನಡೆಯಿತು ಎಂದು ಬರೆಸಿದ್ದೀರಾ ಈ ಸಂಬಂಧ ನಿಮ್ಮ ಬಳಿ ದಾಖಲೆ ಇದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮೃತ ನಾಗರಾಜು ಜೊತೆ ನನಗೆ ವಿವಾಹ ಆದಾಗ ನನ್ನ ವಯಸ್ಸು 35 ವರ್ಷ ಆಗಿತ್ತು. ನನ್ನ ಹುಟ್ಟೂರು, ತವರು ಮನೆ ತುರುವೆಕೆರೆ ತಾಃ ಮಂತ್ರಿಕೇನಹಳ್ಳಿ ಆಗಿರುತ್ತದೆ. ನನ್ನ ತಂದೆ ಹೆಸರು ಪ್ರಕಾಶ್, ನನ್ನ ತಾಯಿ ಹೆಸರು ಪ್ರೇಮ.

2. ನನ್ನ ಮೊದಲನೇ ಮದುವೆ ಕೋಳಘಟ್ಟ ಗ್ರಾಮದ ನರಸಿಂಹಮೂರ್ತಿ ಎನ್ನುವವರ ಜೊತೆ ನಡೆದಿತ್ತು ಎಂದರೆ ಸರಿಯಲ್ಲ. ಸದರಿ ವಿವಾಹದಿಂದ ನಾನು ದಿಃ 19.08.2000 ರಂದು ಹೇಮಂತ್ ಎಸ್ ಎನ್ನುವ ಮಗುವಿಗೆ ಜನ್ಮ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದು ನಿಮ್ಮ ಮೊದಲನೇ ಮಗ ಹೇಮಂತ್ ಎಸ್ ನ ಚುನಾವಣಾ ಮತದಾರರ ಪಟ್ಟಿ ಎಂದು ತೋರಿಸಲಾಗಿ ಸಾಕ್ಷಿ ಅದನ್ನು ಅಲ್ಲಗಳೆದಿರುತ್ತಾರೆ.

ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು ಅದು ಸ.ಹಿ.ಪ್ರಾ.ಶಾಲೆ, ಬಾಣಸಂದ್ರ, ತುರುವೇಕರೆ ತಾಃ ಶಾಲಾ ದಾಖಲಾತಿ ಆಗಿದ್ದು ಅದು ನಿಮ್ಮ ಮಗ ಹೇಮಂತ್ ಎಸ್ ನ ಶಾಲಾ ದಾಖಲಾತಿ ಪತ್ರ ಆಗಿದ್ದು ಅದರಲ್ಲಿ ತಾಯಿ ಹೆಸರು ಸುಧಾಮಣಿ ಎಸ್ ಎಸ್ ಎಂದು ಬರೆದಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಮಗನನ್ನು ಶಾಲೆಗೆ ದಾಖಲಿಸುವಾಗ ನಾವೇ ತಂದೆ ಹೆಸರು ನರಸಿಂಹಮೂರ್ತಿ ಹಾಗೂ ತಾಯಿ ಹೆಸರು ಸುಧಾಮಣಿ ಎಂದು ಹೇಳಿ ಬರೆಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಮಗ ಹೇಮಂತ್ ಎಸ್ 2012-13, 2013-14 ರ ಸಾಲಿನಲ್ಲಿ ಕ್ರಮವಾಗಿ 6 ಮತ್ತು 7 ನೇ ತರಗತಿ ಓದಿದ್ದಾನೆ ಎಂದು ಹೇಳಿ ಸದರಿ ಶಾಲೆಯವರು ವ್ಯಾಸಂಗ ದೃಢೀಕರಣ ಪತ್ರ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ನನ್ನ ಮೊದಲ ಗಂಡ ನರಸಿಂಹಮೂರ್ತಿ ನನ್ನ ಹಾಗೂ ನರಸಿಂಹಮೂರ್ತಿಯ ವಿವಾಹದ ಫಲವಾಗಿ ನಮಗೆ ಹೇಮಂತ್ ಎಸ್ ಎಂಬ ಮಗ ಜನಿಸಿದ್ದಾನೆ ಎಂದರೆ ಸರಿಯಲ್ಲ. ನನ್ನ ಮೊದಲನೇ ವಿವಾಹ ನರಸಿಂಹಮೂರ್ತಿ ಜೊತೆ ನಡೆದಿದ್ದರೂ ಕೂಡ ಹಾಗೂ ನನಗೆ ಹೇಮಂತ್ ಎಸ್ ಎಂಬ ಮಗ ಇದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಿವಾಹ ನರಸಿಂಹಮೂರ್ತಿಜೊತೆ ಆಗಿದ್ದು ಹಾಗೂ ಹೇಮಂತ್ ನನ್ನ ಮಗ ಎಂದು ಹೇಳಲು ಊರಿನ ಸಾಕ್ಷಿ ಹಾಗೂ ಶಾಲಾ ದಾಖಲಾತಿಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ನರಸಿಂಹಮೂರ್ತಿಯವರನ್ನು ಮದುವೆ ಆಗಿಲ್ಲ ಎಂದು ನುಡಿಯುತ್ತಾರೆ. ಈಗಲೂ ಕೂಡ ಹೇಮಂತ್ ಎಸ್ ನನಗೂ ಹಾಗೂ ನನ್ನ ಮೊದಲನೇ ಗಂಡನಿಗೆ ಹುಟ್ಟಿದ ಹೇಮಂತ್ ಎಸ್ ನನ್ನನ್ನು ಬಂದು ನೋಡಿಕೊಂಡು ಹೋಗುತ್ತಾನೆ ಎಂದರೆ ಸರಿಯಲ್ಲ. ನಿಮ್ಮ ಮೊದಲನೇ ಗಂಡ ನರಸಿಂಹಮೂರ್ತಿ ಈಗಲೂ ಜೀವಂತವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

3. ನಾನು ಮೃತ ನಾಗರಾಜು ಅವರನ್ನು ಮದುವೆಯಾಗುವ ಮುನ್ನ ಆತನಿಗೆ ಮದುವೆಯಾಗಿತ್ತು ಹಾಗೂ 2 ಮಕ್ಕಳು ಕೂಡ ಇದ್ದರು ಎಂದರೆ ಸರಿ. ಮೃತ ನಾಗರಾಜು (ವಾದಿ) ಮೊದಲನೇ ಹೆಂಡತಿ ಹೆಸರು ಗಂಗಾಳಮ್ಮ ಎಂದರೆ ಸರಿ. ಮೃತ ನಾಗರಾಜು ಹಾಗೂ ಗಂಗಾಳಮ್ಮಳಿಗೆ ಹೇಮಂತ್ ಹಾಗೂ ಅಕ್ಷತಾ ಎಂಬ ಇಬ್ಬರು ಮಕ್ಕಳಿದ್ದಾರೆ ಎಂದರೆ ಸರಿ. ಈ ವಿಚಾರ ನನಗೆ ಮೃತ ನಾಗರಾಜು ರನ್ನು ಮದುವೆಯಾಗುವ ಮುನ್ನ ಗೊತ್ತಿತ್ತು ಎಂದರೆ ಸರಿ.

ನಾನು ನಾಗರಾಜು ರನ್ನು ಮದುವೆಯಾಗುವ ಮುನ್ನ ಅವರ ತಂದೆ ಪರಮಶಿವಯ್ಯ (ಪ್ರತಿವಾದಿ 1) ರವರನ್ನು ಏನೂ ವಿಚಾರಿಸಲಿಲ್ಲ. ನಾಗರಾಜು ರವರ ತಾಯಿಯನ್ನು ನಾನು ಕೇಳಿಲ್ಲ ಆದರೆ ನಾಗರಾಜು ನನ್ನ ವಿವಾಹದ ಬಗ್ಗೆ ಅವರ ತಾಯಿ ಬಳಿ ಹೇಳಿದ್ದರು.

4. ನಿಮ್ಮ ಮೊದಲನೇ ಗಂಡ ನರಸಿಂಹಮೂರ್ತಿ ಹಾಗೂ ಮಗ ಹೇಮಂತ್ ಎಸ್ ರನ್ನು ನ್ಯಾಯಾಲಯಕ್ಕೆ ಕರೆಸಲು ನಿಮಗೇನೂ ಅಭ್ಯಂತರ ಇಲ್ಲವೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನಾನು ನರಸಿಂಹಮೂರ್ತಿ ಅವರನ್ನು ಮದುವೆ ಆಗಿಲ್ಲ ಎನ್ನುತ್ತಾರೆ. ತುರುವೇಕೆರೆ ತಾಃ ನ ಬಾಣಸಂದ್ರ ಗ್ರಾಮದ ಸ.ಹಿ.ಪ್ರಾ.ಶಾಲೆ ನನಗೆ ಗೊತ್ತು ಎಂದರೆ ಸರಿ. ನಾನು ನರಸಿಂಹಮೂರ್ತಿಯನ್ನು ವಿವಾಹವಾಗಿ ನಾಯಕನಘಟ್ಟ, ಆನೆಕೆರೆ ಅಂಚೆ, ತುರುವೇಕರೆ ಗ್ರಾಮದಲ್ಲಿ ವಾಸವಾಗಿದ್ದೆ ಎಂದರೆ ಸರಿಯಲ್ಲ. ನಾನು ನರಸಿಂಹಮೂರ್ತಿಯನ್ನು ವಿವಾಹವಾಗಿ ನಮಗೆ ಹೇಮಂತ್ ಎಸ್ ಎನ್ನುವ ಮಗ ಹುಟ್ಟಿದ್ದ ಎಂದು ನಾಯಕನಘಟ್ಟ ಗ್ರಾಮಸ್ಥರು ಹೇಳುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ